ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ23-07-2024 ರಂದು ಬೊಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಸಿ ಡಿ ಎನ್ ನ್ಯಾಯವಾದಿರವರಿಂದಃ

ಪಹಣಿ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-1 ಎಂದು, ವಕೀಲರ ಮೂಲಕ ಪ್ರತಿವಾದಿಯರಿಗೆ ನೀಡಿದ ನೋಟೀಸ್ ನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-2 ಎಂದು, ಒಟ್ಟು ಎಳು ಅಂಚೆ ರಶೀಧಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ-3 ಎಂದು, ಆರು ಅಂಚೆ ಸ್ವಿಕೃತಿಗಳನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-4 ರಿಂದ ನಿ.ಪಿ-9 ಎಂದು, ಮೃತ ಕಿರಣ್ ಮಹಾಬಲೇಶ್ವರ ಹಳದನಕರ್ ಇವರಿಗೆ ವಕೀಲರ ಮೂಲಕ ಕಳುಹಿಸಿದ ನೋಟೀಸ್ ಹಿಂದಿರುಗಿ ಬಂದಿದ್ದು, ಸದರಿ ಅಂಚೆ ಲಕೋಟೆಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-10 ಎಂದು, ಹಾಗೂ ನೋಟೀಸ್ ನ್ನು ನಿ.ಪಿ-11 ಎಂದು ಗುರುತಿಸಲಾಯಿತು. ಮೃತ ಮಹಾಬಲೇಶ್ವರ ಹಳದನಕರ್ ಇವರು ನನ್ನ ಗಂಡನ ಹೆಸರಿನಲ್ಲಿ ಬರೆದುಕೊಟ್ಟ ವಿಲ್ ನಾಮೆಯನ್ನು ಹಾಜರುಪಡಿಸಿರುತ್ತಾರೆ.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಆರ್ ಡಿ ನ್ಯಾಯವಾದಿರವರಿಂದಃ

ಈ ದಾವೆಯನ್ನು ನಾನು ಕರಾರು ಪತ್ರದ ಆಧಾರದಲ್ಲಿ ಮಾಡಿರುತ್ತೇನೆ ಎಂದರೆ ಸರಿ. ಮೃತ ಕಿರಣ್ ಮಹಾಬಲೇಶ್ವರ ಹಳದನಕರ್ ರವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ನ್ಯಾಯಾಲಯದಲ್ಲಿ ಕರಾರು ಪತ್ರದ ನಕಲುಪತ್ರವನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ಸದರಿ ನಕಲು ಕರಾರು ಪ್ರತಿಯಲ್ಲಿ ಕರಾರು ಮಾಡಿಕೊಟ್ಟವರ ಸಹಿ ಇರುವುದಿಲ್ಲ ಎಂದರೆ ಸರಿ. ನಾನು ಕರಾರು ಪತ್ರವನ್ನು ಹೊರತುಪಡಿಸಿ ಬೇರೇ ಯಾವುದೇ ದಾಖಲೆಗಳ ಆಧಾರದ ಮೇಲೆ ಈ ದಾವೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮೃತ ಮಹಾಬಲೇಶ್ವರ ಹಳದನಕರ್ ಇವರು ತಮ್ಮ ಜೀವಿತಾವಧಿಯಲ್ಲಿ ದಾವಾಸ್ತಿಯ ಬಗ್ಗೆ ಕರಾರು ಪತ್ರವನ್ನು ಮಾಡಿದ್ದು, ಕ್ರಯ ದಸ್ತವೇಜು ಮಾಡಿಕೊಡುತ್ತೇವೆ ಎಂದು ನಮಗೆ ಭರವಸೆ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಮೂಲ ಕರಾರು ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಸದರಿ ಮೃತ ಮಹಾಬಲೇಶ್ವರ ಹಳದನಕರ್ ಇವರು ಸದರಿ ಮೂಲ ಕರಾರು ಪತ್ರವನ್ನು ತಮ್ಮ ಬಳಿ ಇಟ್ಟುಕೊಂಡಿದ್ದು ನಮಗೆ ಕೊಟ್ಟಿರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ.

2. ನನ್ನ ವಾದ ಪತ್ರದ ಮೂರನೇ ಪ್ಯಾರಾದಲ್ಲಿ ತನುಜಾ ತುಕಾರಾಮ ಕಲ್ಗುಟಕರ್ ಇವರಿಗೂ 20 ಗುಂಟೆ ಖರೀದಿ ಕೊಡಬೇಕು ಎಂಬ ಅಂಶವನ್ನು ಬರೆದಿರುತ್ತೇನೆ ಎಂದರೆ ಸರಿ. ಆದರೆ ಸದರಿ ತನುಜಾ ತುಕಾರಾಮ ಕಲ್ಗುಟಕರ್ ಇವರನ್ನು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಶ್ರೀಮತಿ ತನುಜಾ

ತುಕಾರಾಮ ಕಲ್ಗುಟಕರ್ ಇವರು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರು ಇದ್ದು, ಅವರನ್ನು ಪಕ್ಷಗಾರರನ್ನಾಗಿ ಮಾಡದೇ ಇದ್ದುದರಿಂದ ಈ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಶ್ರೀಮತಿ ತನುಜಾ ತುಕಾರಾಮ ಕಲ್ಗುಟಕರ್ ಇವರಿಗೆ ದಸ್ತಾವೇಜನ್ನು ಮಾಡಿಕೊಟ್ಟಿರುವ ಬಗ್ಗೆ ನಾನು ದಸ್ತಾವೇಜನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಸದರಿ ತನುಜಾ ತುಕಾರಾಮ ಕಲ್ಗುಟಕರ್ ಇವರಿಗೆ 20 ಗುಂಟೆ ಜಮೀನಿಗೆ ಈಗಾಗಲೇ ಬೇರೇಯವರು ದಸ್ತಾವೇಜು ಬರೆದುಕೊಟ್ಟಿದ್ದು ನಮಗೆ ಬರಬೇಕಾದ 40 ಗುಂಟೆ ಅಲ್ಲಿಯೇ ಇರುತ್ತದೆ ಎಂದು ಸಾಕ್ಷ್ಯನುಡಿಯುತ್ತಾರೆ. ಸಾಕ್ಷಿಯು ಸ್ವತಃ 15 ವರ್ಷಗಳು ಆದ ನಂತರ ಕ್ರಯ ದಸ್ತವೇಜು ಮಾಡಿಕೊಡುತ್ತೇವೆ ಎಂದು ಹೇಳಿ ಮಾಡಿಕೊಟ್ಟಿರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಪ್ರತಿವಾದಿಯರು ದಾವಾಸ್ತಿಯನ್ನು ಈಗಾಗಲೇ ಓರ್ವ ಮಾರುತಿ ಬಾಲಚಂದ್ರ ನಾಯ್ಕ ಇವರಿಗೆ ದಿಃ 06-10-2016 ರಂದು ಮಾಡಿದ ನೊಂದಾಯಿತ ದಸ್ತಾವೇಜಿನ ಪ್ರಕಾರ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಹೇಳಿರುವುದಿಲ್ಲ. ಈ ಬಗ್ಗೆ ಸದರಿ ಖರೀದಿ ಪತ್ರದಂತೆ ಮಾರುತಿ ಬಾಲಚಂದ್ರ ನಾಯ್ಕ ಇವರ ಹೆಸರಿನಲ್ಲಿ ಪಹಣಿ ಪತ್ರವನ್ನು ಮತ್ತು ಕಂದಾಯ ದಾಖಲೆಗಳು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಕ್ರಯ ದಸ್ತಾವೇಜಿನ ಆಧಾರದಲ್ಲಿ ಶ್ರೀ ಮಾರುತಿ ಬಾಲಚಂದ್ರ ನಾಯ್ಕ ಇವರು ದಾವಾಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಶ್ರೀ ಮಾರುತಿ ಬಾಲಚಂದ್ರ ನಾಯ್ಕ ಇವರನ್ನು ಅವಶ್ಯಕ ಪಕ್ಷಗಾರರನ್ನಾಗಿ ಮಾಡದೇ ಇರುವುದರಿಂದ ಈ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

3. ಪ್ರತಿವಾದಿಯರು ಯಾವುದೇ ವಿಲ್ ಆಗಲಿ ಅಥವಾ ಕರಾರು ಪತ್ರವಾಗಲಿ ನನ್ನ ಗಂಡನ ಹೆಸರಿನಲ್ಲಿ ಹಾಗೂ ತನುಜಾ ತುಕಾರಾಮ ಕಲ್ಗುಟಕರ್ ರವರ ಹೆಸರಿನಲ್ಲಿ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮಹಾಬಲೇಶ್ವರ ಬಿಕಾರೊ ಹಳದನಕರ್ ಮತ್ತು ಅವರ ಮಕ್ಕಳು ಯಾವುದೇ ದಾವಾ ಕರಾರು ಪತ್ರ ಅಥವಾ ನಾನು ಹಾಜರುಪಡಿಸಿದ ಮೃತ್ಯು ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯು ಮೃತ ಮಹಾಬಲೇಶ್ವರ ನಾಯ್ಕ ಇವರಿಗೆ ದಿಃ 06-07-1981 ರಂದು ಭೂನ್ಯಾಯ ಮಂಡಳಿಯಿಂದ ಮಂಜೂರಾಗಿರುತ್ತದೆ ಎಂದರೆ ಸರಿ. ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಜಮೀನುಗಳನ್ನು ಪರಭಾರೆ ನಿಷೇಧ ಅವಧಿಯೊಳಗೆ ಕರಾರು ಪತ್ರ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರ ಮತ್ತು ಮೃತ್ಯು ಪತ್ರವನ್ನು ನ್ಯಾಯಾಲಯದಲ್ಲಿ ಪುರಾವೆ ಮಾಡಿದರೂ ಸಹಿತ ಅದು ಕಾನೂನಿನಡಿಯಲ್ಲಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರ ಮತ್ತು ಮೃತ್ಯು ಪತ್ರವು ಕಾನೂನು ಬಾಹಿರ ದಾಖಲೆಗಳಾಗಿದ್ದುದರಿಂದ ನನ್ನ ಮೃತ ಗಂಡನಿಗೆ ಯಾವುದೇ ಹಕ್ಕು ಹಿತಾಸಕ್ತಿಗಳು ಸದರಿ ದಾವಾಸ್ತಿಯಲ್ಲಿ ಪ್ರಾಪ್ತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರ ಮತ್ತು ಮೃತ್ಯು ಪತ್ರವನ್ನು

ತಯಾರಿಸುವ ಕಾಲಕ್ಕೆ ನಾನು ಹಾಜರಿರಲಿಲ್ಲ ಎಂದರೆ ಸರಿ. ಸದರಿ ಕರಾರು ಪತ್ರ ಮತ್ತು ಮೃತ್ಯು ಪತ್ರವನ್ನು ಮಾಡುವ ಕಾಲಕ್ಕೆ ನನ್ನ ಗಂಡನ ಜೊತೆ ನಾನು ಸಹ ಹಾಜರಿದ್ದೆನು ಎಂದು ಸಾಕ್ಷಿಯು ಸ್ವಲ್ಪ ಹೊತ್ತಿನ ನಂತರ ಸಾಕ್ಷ್ಯವನ್ನು ನುಡಿಯುತ್ತಾರೆ. ಸದರಿ ಕರಾರು ಪತ್ರ ಹಾಗೂ ಮೃತ್ಯು ಪತ್ರವನ್ನು ತಯಾರಿಸುವ ಕಾಲಕ್ಕೆ ಮಹಾಬಲೇಶ್ವರ ಹಳದನಕರ್, ರಾಮಕೃಷ್ಣ ಹಳದನಕರ್, ರಾಘೊಬಾ ಗಜಿನ್‌ಕರ್ ಹಾಗೂ ಶಶಿಕಾಂತ ಇವರುಗಳು ಹಾಜರಿದ್ದರು. ಮಹಾಬಲೇಶ್ವರ ಹಳದನಕರ್, ರಾಘೊಬಾ ಗಜಿನ್‌ಕರ್ ಹಾಗೂ ಶಶಿಕಾಂತ ಇವರುಗಳು ಮೃತಪಟ್ಟಿದ್ದು, ರಾಮಕೃಷ್ಣ ಹಳದನಕರ್ ಜೀವಿತವಿರುತ್ತಾರೆ. ಸದರಿ ಕರಾರು ಪತ್ರ ಮತ್ತು ಮೃತ್ಯು ಪತ್ರವನ್ನು ಎಲ್ಲಿ ಬರೆದಿದ್ದು, ನಾನು ಕೆ ಆರ್ ಡಿ ದೇಸಾಯಿ ವಕೀಲರ ಕಚೇರಿಯಲ್ಲಿ ಬರೆಸಿರುತ್ತೇನೆ. ಸಾಕ್ಷಿಯು ಈ ಸಮಯದಲ್ಲಿ ಶ್ರೀ ಕೆ ಆರ್ ಡಿ ದೇಸಾಯಿ ವಕೀಲರನ್ನು ನೋಡಿ ನಿಮ್ಮ ಕಚೇರಿಯಲ್ಲಿ ಬರೆಸಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಕರಾರು ಪತ್ರ ಮತ್ತು ಮೃತ್ಯು ಪತ್ರವನ್ನು ಯಾರು ಬೆರಳಚ್ಚು ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಬೇರೇಯವರು ಬೆರಳಚ್ಚು ಮಾಡಿದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ವತಃ ನನ್ನ ಗಂಡನ ಹೆಸರಿಗೆ ಕರಾರು ಪತ್ರ ಮತ್ತು ಮೃತ್ಯು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ, ನನ್ನ ಗಂಡನಿಗೆ ಯಾವುದೇ ಸದರಿ ಕರಾರು ಪತ್ರ ಮತ್ತು ಮೃತ್ಯು ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕೋರಿದ ಮಾಗಣಿಗೆ ನೀವು ಅರ್ಹರಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಸದರಿ ಕರಾರು ಪತ್ರ ಮತ್ತು ಮೃತ್ಯು ಪತ್ರವನ್ನು ಬರೆದುಕೊಡದೇ ಇದ್ದರೂ ಸಹಿತ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ .**

**ಸಿವಿಲ್ ನ್ಯಾಯಾಧೀಶರು ಕಾರವಾರ**